R/R
ನಿಯಮ-330
ಕ್ರ- 72-ಕಂಪ್ಯೂಟರ್

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಆಯನೂರು ಮಂಜುನಾಥ್, ಶ್ರೀ ಎನ್. ರವಿಕುಮಾರ್, ಶ್ರೀ ಸಿ.ಎನ್. ಮಂಜೇಗೌಡ, ಡಾ|| ಡಿ. ತಿಮ್ಮಯ್ಯ ಹಾಗೂ ಶ್ರೀ ಡಿ.ಎಸ್. ಅರುಣ್ ರವರುಗಳು ನಿಯಮ-330 ರಡಿಯಲ್ಲಿ ಮಂಡಿಸಿರುವ ಸೂಚನಾ ಪತ್ರಕ್ಕೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಪ್ರಶ್ನೆ:**

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಮುಂಬಡ್ತಿ ಹೊಂದಿ ಎ.ಎಸ್.ಐ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ವಾರದ ರಜೆ ನೀಡುತ್ತಿಲ್ಲವಾದ್ದರಿಂದ ಈ ನೌಕರರ ಕುಟುಂಬಗಳಿಗೆ ಬಹಳ ತೊಂದರೆಗಳು ಆಗುತ್ತಿವೆ. ಹಾಗೂ ಇವರಿಗೆ ವರ್ಷದ ರಜೆ ದಿನಗಳಾದ ಹಬ್ಬಗಳು ಇತ್ಯಾದಿ ಸಂದರ್ಭದಲ್ಲಿ ಕೆಲಸ ನಿರ್ವಹಿಸಿದ್ದಕ್ಕೆ ಒಂದು ತಿಂಗಳ ಹೆಚ್ಚುವರಿ ಸಂಬಳ ನೀಡುವ ಬದಲು 15 ದಿನಗಳ ಸಂಬಳವನ್ನು ನೀಡುತ್ತಿದ್ದು, ಇದನ್ನು ಒಂದು ತಿಂಗಳಿಗೆ ಹೆಚ್ಚುವರಿ ಮಾಡಿ ಆದೇಶ ಮಾಡುವುದು ಮತ್ತು ಪ್ರತಿ ತಿಂಗಳ ಕಷ್ಟ ಪರಿಹಾರ ಭತ್ಯೆಯನ್ನು 2000 ಸಾವಿರ ನೀಡುತ್ತಿದ್ದು, ಇದನ್ನು 3000 ಸಾವಿರ ಹೆಚ್ಚು ಮಾಡುವುದು. ಮತ್ತು ಈ ಪೋಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿ.ಎ.ಆರ್. ಡಿ.ಎ.ಆರ್ ಹಾಗೂ ಕೆ.ಎಸ್.ಆರ್.ಪಿ ಸಿಬ್ಬಂದಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿ ದಿನಾಂಕ: 31.12.2022 ರೊಳಗೆ ಪರೀಕ್ಷೆಯನ್ನು ಉತ್ತೀರ್ಣರಾಗಲು ನಿಗಧಿಪಡಿಸಿರುವ ಆದೇಶವನ್ನು ತಡೆಹಿಡಿಯಲು ಸರ್ಕಾರವನ್ನು ಒತ್ತಾಯಿಸುತ್ತೇವೆ.

**ಉತ್ತರ:**

**ವಾರದ ರಜೆ:**

ಹೆಚ್‌ಸಿ ಮತ್ತು ಪಿಸಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೋಲೀಸ್ ಸಿಬ್ಬಂದಿಯವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ವೃದ್ಧಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿದೆ. ಎ.ಎಸ್.ಐ ಹುದ್ದೆಯು ಅಧಿಕಾರಿ ದರ್ಜೆಯದ್ದಾಗಿರುವುದರಿಂದ ಸದರಿಯವರುಗಳಿಗೆ ಅವರುಗಳ ಕೆಲಸದ ಒತ್ತಡದ ಅನುಸಾರವಾಗಿ ವಾರದ ರಜೆಯನ್ನು ನೀಡಲಾಗುತ್ತದೆ.

**ಪತ್ರಾಂಕಿತ ರಜೆ:**

ಎ.ಎಸ್.ಐ ಹುದ್ದೆಯಿಂದ ಎಸ್.ಪಿ (ನಾನ್-ಐಪಿಎಸ್) ಹುದ್ದೆಗಳ ವರೆಗಿನ ಅಧಿಕಾರಿ/ಸಿಬ್ಬಂದಿಯವರುಗಳಿಗೆ 30 ದಿನಗಳ ಪತ್ರಾಂಕಿತ ರಜಾ ವೇತನ ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

..2

**ಕಷ್ಟ ಪರಿಹಾರ ಭತ್ಯೆ:**

ಸರ್ಕಾರದ ಆದೇಶ ಸಂಖ್ಯೆ: ಒಇ/6/ಎಸ್‌ಆರ್‌ಪಿ/2019, ದಿನಾಂಕ: 18.10.2019 ರನ್ವಯ ಪೊಲೀಸ್ ಕಾನ್ಸ್‌ಟೇಬಲ್ ರವರುಗಳಿಗೆ ರೂ. 3000/-, ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ರವರುಗಳಿಗೆ ರೂ. 2000/- ಹಾಗೂ ಎ.ಎಸ್.ಐ ರವರುಗಳಿಗೆ ರೂ. 1000/- ಕಷ್ಟ ಪರಿಹಾರ ಭತ್ಯೆಯನ್ನು ನೀಡಲಾಗುತ್ತಿದೆ. ಈ ಭತ್ಯೆಯನ್ನು ಹುದ್ದೆಗಳ ಅನುಸಾರ ನಿಗಧಿಮಾಡಲಾಗಿದ್ದು, ಹೆಚ್‌ಸಿ ಮತ್ತು ಎಎಸ್‌ಐ ಹುದ್ದೆಗಳ ವೇತನ ಶ್ರೇಣಿಗಳು ಪಿಸಿ ಹುದ್ದೆಗಳಿಗಿಂತ ಹೆಚ್ಚಾಗಿರುತ್ತವೆ.

**ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ:**

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2008, ದಿನಾಂಕ: 07.03.2022 ರನ್ವಯ ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರ ನಿಯಮ 1(3) ರಲ್ಲಿ ಗ್ರೂಪ್-ಡಿ ನೌಕರರಿಗೆ ಮತ್ತು ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಮಾತ್ರ ಕಂಪ್ಯೂಟರ್ ಪರೀಕ್ಷೆ ಉತ್ತೀರ್ಣತೆಗೆ ವಿನಾಯಿತಿ ನೀಡಿರುವುದರಿಂದ ಪೊಲೀಸ್ ಇಲಾಖೆಯಲ್ಲಿನ ಗ್ರೂಪ್-ಡಿ ನೌಕರರು ಮತ್ತು ಕಾನ್ಸ್‌ಟೇಬಲ್ ರವರುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವೃಂದದ ಪೊಲೀಸ್ ಸಿಬ್ಬಂದಿಗಳಿಗೆ ಕಂಪ್ಯೂಟರ್ ಕಲಿಕೆ ಕಡ್ಡಾಯ ಮಾಡಲಾಗಿರುತ್ತದೆ. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ರ ನಿಯಮ 3(1) ರನ್ವಯ ಈ ನಿಯಮ ಪ್ರಾರಂಭದ ದಿನಾಂಕದಂದು 50 ವರ್ಷಗಳ ವಯಸ್ಸಾಗಿರುವ ಸರ್ಕಾರಿ ನೌಕರರಿಗೆ ಮಾತ್ರ ವಿನಾಯಿತಿ ನೀಡಲಾಗಿರುತ್ತದೆ.

ಪ್ರಸ್ತುತ ಸರ್ಕಾರವು ಆದೇಶ ಸಂಖ್ಯೆ: ಸಿಆಸುಇ 68 ಕತವ 2019 ದಿನಾಂಕ: 30.11.2019 ರಲ್ಲಿ ಇ-ಆಫೀಸ್ ತಂತ್ರಾಂಶವನ್ನು ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯಗೊಳಿಸಿರುವುದರಿಂದ ಹಾಗೂ ಪ್ರಸ್ತುತ ರಕ್ಷಣೆ, ಬಂದೋಬಸ್ತು ಮತ್ತು ಮತ್ತಿತರ ಎಲ್ಲಾ ವಿಭಾಗಗಳಲ್ಲಿ ಆಧುನಿಕ ತಂತ್ರಾಂಶಗಳ ಬಳಕೆ ಮಾಡುತ್ತಿರುವುದರಿಂದ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿಗಳು ತಂತ್ರಾಂಶ ಬಳಕೆ ಬಗ್ಗೆ ಸಾಮಾನ್ಯ ಜ್ಞಾನವನ್ನು ಹೊಂದಿರುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಮೀಸಲು ಪಡೆಯ ಸಿಬ್ಬಂದಿಗಳು ಆಧುನಿಕ ತಂತ್ರಾಂಶವನ್ನು ರಕ್ಷಣೆ, ಬಂದೋಬಸ್ತ್‌ಗಳಲ್ಲದೆ ದೈನಂದಿನ ಕಾರ್ಯ ನಿರ್ವಹಣೆಗಳಲ್ಲಿಯು ಸಹ ಅಳವಡಿಸಿಕೊಳ್ಳುವ ಮೂಲಕ ಇನ್ನು ಹೆಚ್ಚಿನ ಸುರಕ್ಷಿತವಾಗಿ ಕಾರ್ಯಗಳನ್ನು ನಿರ್ವಹಿಸಲು ಸಾದ್ಯವಾಗುತ್ತದೆ. ಆದ್ದರಿಂದ ಕಾನೂನು ಪಾಲನೆ, ಗಣ್ಯವ್ಯಕ್ತಿಗಳ ರಕ್ಷಣೆಗೆ ಮೀಸಲಾಗಿರುವ ಪಡೆಗಳಲ್ಲಿನ ಸಿ.ಎ.ಆರ್, ಡಿ.ಎ.ಆರ್ ಹಾಗೂ ಕೆ.ಎಸ್.ಆರ್.ಪಿ ಸಿಬ್ಬಂದಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಕಡ್ಡಾಯಗೊಳಿಸಿರುವುದು ಸೂಕ್ತವಾಗಿರುತ್ತದೆ.

HD/210/PPS/2022 PS-B

(ಆರಗ ಜ್ಞಾನೇಂದ್ರ)
ಗೃಹ ಸಚಿವರು